ಕೊಡುವ 'ಸಂಸ್ಕೃತಿಶಿಕ್ಷಣ ಕೇಂದ್ರ'ಗಳನ್ನು ದೇವಸ್ಥಾನಗಳಲ್ಲಿ ಸ್ಥಾಪಿಸಬೇಕು. ೧೦. ಭಾರತೀಯ ಸಂಸ್ಕೃತಿಯನ್ನು ಪ್ರತಿನಿಧಿಸುವ ಮುಖ್ಯ ವಿಚಾರ-ಸಂದೇಶಗಳನ್ನು ಪಠ್ಯಪುಸ್ತಕಗಳ ರೂಪದಲ್ಲಿ ಪ್ರಕಟಿಸಿ, ಎಲ್ಲ ಅವಶ್ಯಕ ವಿಚಾರಗಳು ಸಮಸ್ತ ಜನಮಾನಸವನ್ನು ತಲಪುವಂತೆ ಮಾಡಬೇಕು. ಅಂತಹ ಕೆಲವು ಸಂಭಾವ್ಯ ವಿಷಯಗಳ ಪಟ್ಟಿ ಹೀಗಿದೆ: ನಿತ್ಯ ಅನುಷ್ಠಾನ, ಗೀತೆ-ಉಪನಿಷತ್ತುಗಳ ಸಂದೇಶ, ರಾಮಾಯಣ ಮಹಾಭಾರತ ಭಾಗವತಗಳ ಸಂಕ್ಷಿಪ್ತ ಪರಿಚಯ, ಪೂಜಾಪಾರಾಯಣ ವಿಧಾನಗಳ ಮತ್ತು ನಮ್ಮ ಧಾರ್ಮಿಕ ಹಬ್ಬಗಳನ್ನು ಆಚರಿಸುವ ಸರಳ ಕ್ರಮ ಮತ್ತು ಅರ್ಥ, ಷೋಡಶ ಸಂಸ್ಕಾರಗಳ ಅರ್ಥ, ಸಂತಶ್ರೇಷ್ಠರ ಜೀವನ ಸಂದೇಶ, ಶರಣರ ವಚನಗಳು ಮತ್ತು ದಾಸರ ಕೀರ್ತನೆಗಳು ಇತ್ಯಾದಿ. ೧೧. ದೇವಸ್ಥಾನಗಳ ಅರ್ಚಕರಿಗೆ ಧಾರ್ಮಿಕ ಸಂಸ್ಕಾರ ಮತ್ತು ಆಚರಣೆಗಳ ಮಹತ್ವವನ್ನು ತಿಳಿಸಿಕೊಡುವ ತರಬೇತಿ ನೀಡಬೇಕು. ೧೨. ಮುಸ್ಲಿಂ ಮತ್ತು ಕ್ರಿಶ್ಚಿಯನ್ ಮತೀಯರು ತಮ್ಮ ಮದರಸಾ, ಚರ್ಚ್ ಹಾಗೂ ಬೈಬಲ್ ಸೊಸೈಟಿಗಳ ಮೂಲಕ ತಮ್ಮ ತಮ್ಮ ಸಮುದಾಯಗಳಿಗೆ ಪರಿಣಾಮಕಾರಿಯಾಗಿ ಧಾರ್ಮಿಕಶಿಕ್ಷಣ ನೀಡುವಂತೆಯೇ ನಮ್ಮ ದೇವಸ್ಥಾನಗಳೂ, ಅಷ್ಟೇ ಪರಿಣಾಮಕಾರಿಯಾಗಿ ಹಾಗೂ ಅರ್ಥಪೂರ್ಣವಾಗಿ ಜ್ಞಾನಪ್ರಸಾರ ಮಾಡಬೇಕು. ೧೩. ಮೇಲೆ ತಿಳಿಸಿದ ಸೇವಾ ಮತ್ತು ಧರ್ಮಶಿಕ್ಷಣ ಆಂದೋಲನದ ಆಯಾಮಗಳನ್ನು ತಮ್ಮ ವಿಶಿಷ್ಟ ಅಂಗಗಳಾಗಿ ಹೊಂದಿರುವ **'ನವದೇವಾಲಯ ಶಕ್ತಿಸಂಚಲನ'** (Neo Temple Movement) ರಾಷ್ಟ್ರವ್ಯಾಪಿಯಾಗಿ ನಡೆಯಬೇಕು. ೧೪. ಪ್ರಾಥಮಿಕ ಧಾರ್ಮಿಕ ವಿಚಾರಗಳನ್ನು ಜನರು ಕಲಿತ ನಂತರ ಅವರಿಗೆ ಪ್ರಮಾಣಪತ್ರಗಳನ್ನು ನೀಡಿ ಪ್ರೋತ್ಸಾಹಿಸಬೇಕು.

### ತಾರತಮ್ಯ ಮತ್ತು ವಿಪರ್ಯಾಸಗಳನ್ನು ಎದುರಿಸುವ ಸವಾಲು ಹಾಗೂ ಪರಿಹಾರ

▪ ಧರ್ಮಪ್ರಸಾರ ಕಾರ್ಯವು ಸಮಾಜದ ಎಲ್ಲಾ ಸ್ತರಗಳಿಗೆ ಹಾಗೂ ಸಮುದಾಯಗಳಿಗೆ ನಿರಂತರವಾಗಿ ತಲುಪಬೇಕಾಗಿದ್ದರೆ, ಆ ಕಾರ್ಯಕ್ಕಾಗಿ ನಮ್ಮ ಸನಾತನ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ದೇವಸ್ಥಾನಗಳು ಮಾತ್ರವೇ ಆಸರೆಯಾಗಿವೆ. ▪ ಪ್ರಸ್ತುತ ರಾಜಕೀಯ ಸನ್ನಿವೇಶದಲ್ಲಿ ನಮ್ಮ ಶಿಕ್ಷಣವು 'ಧರ್ಮನಿರಪೇಕ್ಷ' ವಾಗಿರುವು ದರಿಂದ, ಶಿಕ್ಷಣಸಂಸ್ಥೆಗಳ ಮೂಲಕ, ಈ ದೇಶದ ಸನಾತನ ಸಂಸ್ಕೃತಿ ಹಾಗೂ ಧರ್ಮಕ್ಕೆ ಸಂಬಂಧಿಸಿದಂತೆ ಶಿಕ್ಷಣ ನೀಡಲು ನಮಗೆ ಸಾಧ್ಯವಾಗುತ್ತಿಲ್ಲ. ಇದು ನಿಜವಾಗಿಯೂ ದುಃಖಕರವಾದ ಸಂಗತಿ. ಸಂಸ್ಕೃತಿ ಎನ್ನುವುದು ಒಂದು ದೇಶದ ಅವಿಭಾಜ್ಯ ಅಂಗ ಮತ್ತು ಆಧಾರ. ಆದ್ದರಿಂದ ಸಂಸ್ಕೃತಿ ರಕ್ಷಣೆಯು ಅದರ ನೈಜ ಅರ್ಥದಲ್ಲಿ ದೇಶ ಮತ್ತು ಸಮಾಜದ ರಕ್ಷಣೆಯೇ ಆಗಿದೆ. ಇಂದಿನ ಶಿಕ್ಷಣಪದ್ಧತಿಯಲ್ಲಿ ಇದು ಸಹಜವಾಗಿ ಒಳಗೊಳ್ಳಬೇಕಾಗಿತ್ತು. ▪ ಆದರೆ, ಅನ್ಯ ಮತೀಯರು ಅಲ್ಪಸಂಖ್ಯಾತರಾಗಿರುವುದರಿಂದ, ಸಂವಿಧಾನಾತ್ಮಕವಾಗಿ ಅವರಿಗೆ ಒದಗಿಸಿರುವ ವಿಶೇಷ ಸೌಲಭ್ಯ ಸವಲತ್ತುಗಳ ಮೂಲಕ, ತಮ್ಮ ಮತದ ಭಾವನೆಗಳನ್ನು ಧಾರ್ಮಿಕ ಕೇಂದ್ರಗಳಾದ ಮಸೀದಿ, ಮದರಸಾ, ಚರ್ಚ್ ಹಾಗೂ ಅವರು ನಡೆಸುವ ಶಿಕ್ಷಣಕೇಂದ್ರಗಳ ಮೂಲಕ ನೀಡುವ ಮತ್ತು ಬೋಧಿಸುವ ಅವಕಾಶವಿದೆ. ▪ ಆದರೆ ವಿಪರ್ಯಾಸವೆಂದರೆ, ವಿಶಾಲ ಭಾವನೆಯಿರುವ, ಉದಾತ್ತತತ್ವಗಳುಳ್ಳ, ಯಾರಿಗೂ ವಿರೋಧ ಬಯಸದ ಹಿಂದೂ ಜನಾಂಗದವರು ಬಹುಸಂಖ್ಯಾತರೆಂಬ ಒಂದೇ ಕಾರಣಕ್ಕಾಗಿ ಅವರು ಯಾವುದೇ ಧಾರ್ಮಿಕಶಿಕ್ಷಣ ಮತ್ತು ರಾಷ್ಟ್ರೀಯತೆಯನ್ನು ಬೆಳೆಸಿಕೊಳ್ಳುವ ಪ್ರಯತ್ನ ಮಾತ್ರ 'ಕೋಮುವಾದ'ವೆಂಬ ಅಪವಾದಕ್ಕೀಡಾಗುತ್ತಿದೆ! ▪ ಸುಮಾರು ಶೇ.೩೦ ರಿಂದ ೭೦ ರಷ್ಟು ನಮ್ಮ ಜನರು ಯಾವ ಮತಮಾನ್ಯಗಳ ಅಥವಾ ದೇವಸ್ಥಾನಗಳ ನೇರ ಸಂಪರ್ಕವಿಲ್ಲದೆ ಅತಂತ್ರರಾಗಿ, ಸ್ವೇಚ್ಛಾಚಾರಿಗಳಾಗಿ, ನಾಸ್ತಿಕರಾಗಿ ಇಲ್ಲವೇ ಗೊಡ್ಡು ಆಚಾರಗಳಲ್ಲೇ ನಿರತರಾಗಿರುವುದರಿಂದ, ಧರ್ಮದ ಆಧ್ಯಾತ್ಮಿಕ ಮುಖ್ಯವಾಹಿನಿಯಿಂದ ಹೊರಗೇ ಉಳಿದಿದ್ದಾರೆ. ಇಂತಹವರಲ್ಲಿ ಅನೇಕರು ಅನ್ಯಮತೀಯರ ಪ್ರಭಾವಕ್ಕೆ ಒಳಗಾಗುವ ಸಾಧ್ಯತೆ ಹೆಚ್ಚು. ▪ **ಅನುಯಾಯಿಗಳ ಜನಸಂಖ್ಯಾಬಲ** – ಧರ್ಮದ ತಿಳಿವಳಿಕೆ ಮತ್ತು ಅದರ ಅನುಷ್ಠಾನ ದಿನೇದಿನೇ ಕ್ಷೀಣಿಸುತ್ತಿದೆ. ಹೀಗಿರುವಾಗ ನಮ್ಮ ಧರ್ಮ ಪ್ರವರ್ಧಮಾನಕ್ಕೆ ಬರುವುದು ಹೇಗೆ? ತನ್ನ ಮೂಲೋದ್ದೇಶ ವನ್ನೇ ಮರೆತ ಪ್ರಸ್ತುತ ಧರ್ಮನಿರಪೇಕ್ಷ ಆಡಳಿತ ವ್ಯವಸ್ಥೆಯಲ್ಲಿ ಸನಾತನಧರ್ಮದ ಭವಿಷ್ಯ ಚಿಂತಾಜನಕವಾಗಿದೆ. ▪ ದೇವಾಲಯಗಳಿಗೆ ಸಂಬಂಧಿಸಿದಂತೆ ಹರಕೆಗಳ ಮೂಲಕ ಬೆಳ್ಳಿ-ಬಂಗಾರ, ಆಭರಣಗಳನ್ನು ಅರ್ಪಿಸುವ ಪದ್ಧತಿ ಅನೇಕ ಶ್ರದ್ಧಾವಂತರಲ್ಲಿ ಕಂಡುಬರುತ್ತದೆ. ಆದರೆ ಅದನ್ನು ಅನವಶ್ಯಕ ಬಾಹ್ಯವೈಭವಕ್ಕಾಗಿ ಖರ್ಚು ಮಾಡದೆ, ಬಡವರ ಸೇವೆ ಮತ್ತು ಧರ್ಮಶಿಕ್ಷಣಕ್ಕಾಗಿ ವಿನಿಯೋಗಿಸುವಂತಾಗಬೇಕು. ಬಾಹ್ಯಾಡಂಬರದ ಆಚರಣೆ ಒಂದು ಮಿತಿಗಿಂತ ಹೆಚ್ಚು ಅನವಶ್ಯಕವಷ್ಟೇ ಅಲ್ಲ, ಭದ್ರತೆಯ ದೃಷ್ಟಿಯಿಂದಲೂ ಅಪಾಯಕಾರಿ. ದೇವಸ್ಥಾನಗಳ ಕಣ್ಣುಕುಕ್ಕುವ ಆಭರಣಗಳ ಸಂಪತ್ತು ಘೋರಿ, ಘಜ್ನಿಗಳಂಥವರಿಗೆ ಆಹ್ವಾನ ನೀಡುವುದಷ್ಟೇ ಅಲ್ಲ, ದೇವಸ್ಥಾನದ ಸುತ್ತಮುತ್ತಲಿರುವ ಜನರನ್ನು ಕಳ್ಳತನಕ್ಕೆ ಪ್ರಚೋದಿಸಲೂಬಹುದು. ಇಂತಹ ಪ್ರಸಂಗಗಳು ಇತ್ತೀಚಿನ ದಿನಗಳಲ್ಲಿ ಎಲ್ಲರ ಗಮನವನ್ನೂ ಸೆಳೆದಿವೆ. **ಜನಮಾನಸದಲ್ಲಿ ಹೃದ್ಗತವಾದ ಶ್ರದ್ಧೆ ಭಕ್ತಿ ಜ್ಞಾನ ಸಂಸ್ಕಾರಗಳೇ ದೇವಾಲಯಗಳ ಮತ್ತು ಧರ್ಮದ ನಿಜವಾದ ಐಶ್ವರ್ಯ.** ಧರ್ಮದ ಅರಿವು, ಸರ್ವಪ್ರಕಾರದಲ್ಲಿಯೂ ಶ್ರದ್ಧಾಭಕ್ತಿಗಳನ್ನು ಜನರಲ್ಲಿ ಮೂಡುವಂತೆ ಮಾಡುವ ಪ್ರಯತ್ನ – ಇವು ಈಗಿನ ಪರಿಸ್ಥಿತಿಯಲ್ಲಿ ದೇವಾಲಯಗಳ ಮೂಲಕ ಮಾತ್ರ ಸಾಧ್ಯ. ಅದಕ್ಕಾಗಿ ನಮ್ಮ ದೇವಾಲಯಗಳನ್ನು ಮತ್ತು ಅಲ್ಲಿಯ ಭಕ್ತರನ್ನು, ಆಡಳಿತ ಮಂಡಳಿಯವರನ್ನು ಹಾಗೂ ಇನ್ನಿತರ ಸಂಬಂಧಪಟ್ಟ ವ್ಯಕ್ತಿಗಳ ಮನಸ್ಸನ್ನು ಇದಕ್ಕಾಗಿ ಎಚ್ಚರಿಸಿ,

ಸಜ್ಜುಗೊಳಿಸುವುದು ಅತ್ಯಗತ್ಯ. ▪ ನಮ್ಮ ದೇವಾಲಯಗಳಲ್ಲಿ ಪಾವಿತ್ರ್ಯತೆಯನ್ನು ಕಾಪಾಡಿಕೊಂಡು ಆಧ್ಯಾತ್ಮಿಕ ವಾತಾವರಣವನ್ನು ನಿರ್ಮಿಸಬೇಕಾದರೆ ದೇವಾಲಯಗಳನ್ನು ಗಲಾಟೆ ಗಲೀಜುಗಳಿಂದ ಮುಕ್ತಗೊಳಿಸಬೇಕು. ▪ ದೇವಾಲಯವು ಒಂದು ವ್ಯಾಪಾರ ಕೇಂದ್ರವಾಗದಂತೆ ತಡೆಯಬೇಕು. ದೇವಾಲಯದ ಆವರಣದ ಒಳಗೇ ತೀರ್ಥಪ್ರಸಾದಾದಿಗಳನ್ನು ಅತಿಶಯವಾಗಿ ಮಾರುವುದು ಆಧ್ಯಾತ್ಮಿಕತೆಗೆ ಧಕ್ಕೆ ತರುವಂತಹ ವಾತಾವರಣಕ್ಕೆ ಕಾರಣವಾಗುತ್ತದೆ. ಇದು ಬೇರೆ ವಸ್ತುಗಳ ವ್ಯಾಪಾರಗಳಿಗೂ ನಾಂದಿಯಾಗುತ್ತದೆ. ಹೀಗೆ ದೇವಾಲಯದ ಪರಿಸರವು ವಾಣಿಜ್ಯಸಮುಚ್ಚಯವಾಗುತ್ತದೆ. ಇವುಗಳು ದೇವಸ್ಥಾನದ ಹೊರಗೆ ಇರಬೇಕು. ಆಗ ಮಾತ್ರ ದೇವಸ್ಥಾನದ ಶಾಂತಿಯನ್ನು ಕಾಪಾಡಿಕೊಳ್ಳುವುದು ಸಾಧ್ಯ. ನಮ್ಮ ಹೃನ್ಮನಗಳು ಭಗವಂತನ ಪೂಜೆ, ಪ್ರಾರ್ಥನೆ ಮತ್ತು ಧ್ಯಾನಾದಿಗಳಲ್ಲಿ ಅನುರಕ್ತವಾಗುವ ವಾತಾವರಣವನ್ನು ದೇವಸ್ಥಾನಗಳು ಕಲ್ಪಿಸಬೇಕು. ▪ ನೀತಿ ಇಲ್ಲದ ಧರ್ಮವು ಪರಿಮಳವಿಲ್ಲದ ಶ್ರೀಗಂಧದಂತೆ. ಆದ್ದರಿಂದ ದೇವಾಲಯಗಳ ಮೂಲಕ ನಡೆಯುವ ಧರ್ಮಾಚರಣೆಯಲ್ಲಿ ನೀತಿಗೆ ಪ್ರಾಧಾನ್ಯವಿರಬೇಕು. ನಮ್ಮ ಧರ್ಮ ಅವನತಿ ಹೊಂದುತ್ತಿರುವುದಕ್ಕೆ ಕಾರಣ ಹಿಂದೂಗಳು ನೀತಿಭ್ರಷ್ಟರಾಗುತ್ತಿರುವುದು ಮತ್ತು ಸಂಘಟಿತರಾಗದೇ ಇರುವುದು.

### ದೇವಸ್ಥಾನಗಳನ್ನು ಸೇವಾಕ್ಷೇತ್ರಗಳಾಗಿ ವಿಸ್ತಾರಗೊಳಿಸುವುದು

೧. ದೇವಸ್ಥಾನಗಳು ತಮ್ಮ ಅನುಯಾಯಿಗಳಿಗೆ, ಯಾರ ಅಪೇಕ್ಷೆಯೂ ಇಲ್ಲದೆ, ಅಡೆತಡೆಯಿಲ್ಲದೆ ಧರ್ಮಶಿಕ್ಷಣವನ್ನು ಕೊಡಲು ಸಾಧ್ಯ. ಇದನ್ನು ಯಾರೂ ಪ್ರಶ್ನಿಸುವಂತಿಲ್ಲ. ಈ ಧರ್ಮಶಿಕ್ಷಣ ಕಾರ್ಯವನ್ನು ದೇವಾಲಯಗಳ ಮೂಲಕ ನಾವು ತೀವ್ರಗತಿಯಿಂದ, ಕ್ರಮಬದ್ಧವಾಗಿ, ಸಂಘಟನಾ ಕೌಶಲ್ಯದಿಂದ ಪರಿಣಾಮಕಾರಿಯಾಗಿ ಮಾಡಬೇಕು.

೨. ಸನಾತನಸಂಸ್ಕೃತಿಯ ಜ್ಞಾನ ಮತ್ತು ಸಂಸ್ಕಾರವನ್ನು ಗ್ರಾಮಾಂತರ ಜನರಿಗೆ, ಅವರವರ ಮಾತೃಭಾಷೆಯ ಮಾಧ್ಯಮಗಳ ಮೂಲಕ, ಕ್ರಮಬದ್ಧವಾಗಿ ನೀಡುವ ಪ್ರಾಮಾಣಿಕ ಪ್ರಯತ್ನ ಆಗಬೇಕು.

೩. ಅದೇ ರೀತಿ ಇನ್ನು ಮುಂದೆ ಹೊಸ ದೇವಸ್ಥಾನಗಳನ್ನು ನಿರ್ಮಾಣ ಮಾಡುವಾಗ, ಸಾಂಪ್ರದಾಯಿಕ ಪೂಜೆಯ ಜೊತೆಗೆ ಧರ್ಮಶಿಕ್ಷಣ, ದೀನದಲಿತರ ಸೇವೆ ಮುಂತಾದ ಆಯಾಮಗಳನ್ನೊಳಗೊಂಡ ಒಂದು ಹೊಸ ಆಂದೋಲನವನ್ನು ಪ್ರಾರಂಭ ಮಾಡಬೇಕು. ಇದನ್ನು Neo Temple Movement — 'ನೂತನ ದೇವಸ್ಥಾನ ಶಕ್ತಿಸಂಚಲನ' ಎಂದು ಕರೆಯಬಹುದು.

### ಪರಮಪೂಜ್ಯ ಸ್ವಾಮೀಜಿಯವರಲ್ಲಿ, ಸಾಧುಸಂತರಲ್ಲಿ ಹಾಗೂ ಧರ್ಮಾಧಿಕಾರಿಗಳಲ್ಲಿ ವಿಶೇಷ ನಿವೇದನೆ

೧. ಸನಾತನಧರ್ಮದ ಎಲ್ಲ ಸಾಧುಸಂತರಿಗೆ ಕರೆಕೊಟ್ಟು **'ಭಾರತೀಯ ಆಧ್ಯಾತ್ಮಿಕ ಸಮ್ಮಿಲನ'** ಎಂಬ ಒಂದೆರಡು ದಿನಗಳ ಸಮಾವೇಶವನ್ನು ನಡೆಸಿ, ತನ್ಮೂಲಕ ಈ ಮೇಲಿನ ಮುಖ್ಯವಿಷಯವನ್ನು ಎಲ್ಲರ ಅವಗಾಹನೆಗೆ ತರುವುದು ಅವಶ್ಯಕ.

೨. ಗ್ರಾಮಾಂತರ ಮತ್ತು ಪಟ್ಟಣದಲ್ಲಿರುವ, ನಮ್ಮ ಸಂಸ್ಕೃತಿಗೆ ಸೇರಿದ ಶೇ.೫೦ ರಿಂದ ೬೦ ರಷ್ಟು ಜನರು ಧರ್ಮಶಿಕ್ಷಣ ದಿಂದ ವಂಚಿತರಾಗಿದ್ದಾರೆ. ಇತರ ಪ್ರಭಾವಗಳಿಗೆ ಮಾರುಹೋಗಿ, ಸನಾತನಸಂಸ್ಕೃತಿಯಿಂದ ದೂರ ಹೋಗುವಂತಹ ಜನರಿಗೆ ಸತತವಾಗಿ ನಮ್ಮ ಆಧ್ಯಾತ್ಮಿಕ ಭಾವಧಾರೆಯನ್ನು ನೀಡಿ, ಅವರು ಕೂಡ ಸನಾತನ ಧರ್ಮದ ಮುಖ್ಯವಾಹಿನಿ ಯಲ್ಲಿ ಬೇರೂರುವಂತೆ ಮಾಡುವುದು ನಮ್ಮ ಆದ್ಯ ಕರ್ತವ್ಯ.

೩. ಎಲ್ಲ ಸಂಪ್ರದಾಯಗಳ, ಎಲ್ಲ ಜಾತಿ, ಕುಲ-ಗೋತ್ರಗಳ ಮತ್ತು ಗ್ರಾಮಾಂತರ ಹಾಗೂ ನಗರ ಪ್ರದೇಶಗಳ ಜನರನ್ನು ಒಗ್ಗೂಡಿಸುವ ಮತ್ತು ಸಾಂಸ್ಕೃತಿಕವಾಗಿ ಹಾಗೂ ಆಧ್ಯಾತ್ಮಿಕವಾಗಿ ಅವರುಗಳನ್ನು ಜಾಗೃತಗೊಳಿಸುವ ದೀರ್ಘಾವಧಿ ಯೋಜನೆಯು ಇಂದಿನ ಆವಶ್ಯಕತೆಯಾಗಿದೆ.

**ಶ್ರೀರಾಮಕೃಷ್ಣ ಪರಮಹಂಸರು ಬೋಧಿಸುವ ಸರಳ ನಾರದೀಯ ಭಕ್ತಿ, ವಿವೇಕಾನಂದರು ಬೋಧಿಸುವ ಒಳ್ಳೆಯತನ ಹಾಗೂ ಶ್ರೀಶಾರದಾಮಾತೆಯವರ ಕ್ರಿಯಾಶೀಲತೆ — ಈ ಮೂರನ್ನು ಒಳಗೊಂಡ ಧರ್ಮಾಚರಣೆಯನ್ನು ನಾವು ಇಂದು ಸಮಾಜಕ್ಕೆ ಬೋಧಿಸಬೇಕಾಗಿದೆ. ಸ್ವಾಮಿ ವಿವೇಕಾನಂದರು ಹೇಳಿದಂತೆ ಇಡೀ ಧರ್ಮದ ಸಾರಸಂಗ್ರಹವೇ "ನಾವು ಪರಿಶುದ್ಧ ರಾಗಿರುವುದು ಮತ್ತು ಇತರರಿಗೆ ಒಳ್ಳೆಯದನ್ನು ಮಾಡುವುದು." ಇದೇ ನಮ್ಮ ಧರ್ಮಾನುಷ್ಠಾನದ ಮೂಲಮಂತ್ರವಾಗಬೇಕು.**

**ಪ್ರಕೃತಿಯು ಸೂರ್ಯನ ಬಿಸಿಲು ಮತ್ತು ಆಮ್ಲಜನಕ ಹೊತ್ತ ಗಾಳಿಯನ್ನು ಯಾವರೀತಿಯಲ್ಲಿ ಎಲ್ಲರಿಗೂ ತಾರತಮ್ಯವಿಲ್ಲದೆ ದೊರಕುವಂತೆ ಮಾಡುತ್ತದೆಯೋ, ಅದೇ ರೀತಿ ಧರ್ಮದ ತಿರುಳನ್ನು ಸುಲಭ ಮತ್ತು ಸರಳವನ್ನಾಗಿ ಮಾಡಿ, ಎಲ್ಲ ಜನಸಾಮಾನ್ಯರಿಗೂ ಭೇದಭಾವವಿಲ್ಲದೆ ತಲುಪಿಸುವ ಧನಾತ್ಮಕ ಚಿಂತನೆ ಮತ್ತು ಸಕ್ರಿಯವಾದ ಪ್ರಾಯೋಗಿಕ ಕಾರ್ಯಕ್ರಮದ ಆವಶ್ಯಕತೆ ಇಂದು ಹಿಂದೆಂದಿಗಿಂತಲೂ ಹೆಚ್ಚಾಗಿದೆ.** ✦

# ಸೋದರಿ ನಿವೇದಿತಾ ನೀಡಿದ ಅಂತಿಮ ಸಂದೇಶ: 'ಧೀರೋದಾತ್ತ ಹಿಂದೂಧರ್ಮ'

ಸ್ವಾಮಿ ಸುನಿರ್ಮಲಾನಂದ



ಸಂಸ್ಕೃತಿ ರಕ್ಷಣೆ

**ಸೋದರಿ ನಿವೇದಿತಾ ಹಿಂದೂಧರ್ಮದ ಬಹು ದೊಡ್ಡ ಅಭಿಮಾನಿ. ಹಿಂದೂಸಮಾಜವು ಅತ್ಯಂತ ದುರ್ಬಲವಾಗಿರುವುದನ್ನು, ಸಂಘಟನೆ ಇಲ್ಲದೆ ಒಡೆದು ಹೋಗಿರುವುದನ್ನು ಕಂಡು ಅವರ ಮನಸ್ಸು ತುಂಬ ನೊಂದುಹೋಗಿತ್ತು. ಹಾಗೆಂದೇ ಅವರು ಹಿಂದೂಗಳಿಗೆ ಧೀರೋದಾತ್ತತೆಯ ಕರೆಯನ್ನು ನೀಡುವ ಒಂದು ಸಣ್ಣ ಪುಸ್ತಕವನ್ನು ಬರೆದರು. ಅದರ ಮಾರ್ಮಿಕ ಪರಿಚಯವನ್ನು ಮಾಡಿಕೊಟ್ಟಿರುವ ಸ್ವಾಮೀಜಿಯವರು ರಾಮಕೃಷ್ಣ ಮಹಾಸಂಘದ ಇಂಗ್ಲಿಷ್‌ಪತ್ರಿಕೆಯಾದ 'ಪ್ರಬುದ್ಧಭಾರತ'ದ ಸಂಪಾದಕರಾಗಿದ್ದರು. ಕನ್ನಡ, ಬಂಗಾಳಿ, ಇಂಗ್ಲಿಷ್ ಭಾಷೆಗಳಲ್ಲಿ ಉತ್ತಮ ಪ್ರಭುತ್ವ ಹೊಂದಿರುವ ಸ್ವಾಮೀಜಿಯವರು ಹಲವಾರು ಪುಸ್ತಕಗಳನ್ನು ಅನುವಾದಿಸಿದ್ದಾರೆ ಮತ್ತು ಲೇಖನಗಳನ್ನು ಬರೆದಿದ್ದಾರೆ.**

**ನೀವು ಓದಿದ್ದೀರಾ?:** ಸೋದರಿ ನಿವೇದಿತಾ (ಮಾರ್ಗರೆಟ್ ನೊಬೆಲ್) ಒಂದು ಪುಟ್ಟ ಇಂಗ್ಲಿಷ್ ಪುಸ್ತಕವನ್ನು ಬರೆದಿದ್ದಾರೆ. ಅದರ ಹೆಸರು 'ಅಗ್ರೆಸಿವ್ ಹಿಂದೂಯಿಸಮ್' (Aggressive Hinduism) ಎಂದು. ನೀವು ಈ ಪುಸ್ತಕವನ್ನು ಓದಿದ್ದೀರಾ? ಓದಿಲ್ಲದಿದ್ದಲ್ಲಿ ದಯವಿಟ್ಟು ಓದಬೇಕು, ಓದಿ ಹೃದ್ಗತ ಮಾಡಿಕೊಳ್ಳಬೇಕು. ನಿವೇದಿತಾ ತಮ್ಮ ಈ ಅದ್ಭುತ ಪುಸ್ತಕದ ಬಗ್ಗೆ ಹೀಗೆ ಹೇಳುತ್ತಾರೆ: "ಇದು ಬಹುಶಃ ನನ್ನ 'ಅಂತಿಮ ಉಯಿಲು' ಅಥವಾ 'ಕೊನೆಯ ಸಂದೇಶ.' " ಯಾರಿಗೆ ಈ 'ಸಂದೇಶ'? ಹಿಂದೂಗಳಿಗೆ ಮಾತ್ರವೇ ಅಲ್ಲ, ಇಡೀ ಭರತ ಖಂಡದ ಎಲ್ಲ ಜನರಿಗೆ.

ಎಲ್ಲರಿಗೂ ತಿಳಿದಿರುವಂತೆ, ಮಾರ್ಗರೆಟ್ ನೊಬೆಲ್ ಕ್ರೈಸ್ತ ಮತದಲ್ಲಿ ಜನ್ಮ ತಳೆದಿದ್ದರೂ ದಿನದಿಂದ ದಿನಕ್ಕೆ ಅವರ ಮನಸ್ಸು ಹೆಚ್ಚು ಅರ್ಥಪೂರ್ಣವಾದ ಸತ್ಯಗಳ ಅನ್ವೇಷಣೆ ಮಾಡುತ್ತಿತ್ತು. 'ನಾನೇಕೆ ಹಿಂದುವಾದೆ?' ಎಂಬ ಲೇಖನದಲ್ಲಿ ಬರೆಯುವಂತೆ, ಅವರ ಅನುಸಂಧಾನ ಅವರನ್ನು ಸ್ವಾಮಿ ವಿವೇಕಾನಂದರ ಚರಣಗಳ ಬಳಿಗೆ ಕರೆತಂದಿತು. ವಿವೇಕಾನಂದರೊಂದಿಗೆ ನೊಬೆಲ್ ಬಹಳ ವಾದವಿವಾದ ಮಾಡಿದರು. ಕಡೆಗೆ ಅವರಿಗೆ ಧರ್ಮ ಮತ್ತು ಅಧ್ಯಾತ್ಮಗಳ ಬಗ್ಗೆ ಇದ್ದ ಎಲ್ಲ ಸಮಸ್ಯೆಗಳಿಗೂ ವಿವೇಕಾನಂದರಲ್ಲಿ ಸಮಾಧಾನ ದೊರಕಿತು. ವಿವೇಕಾನಂದರು ಈ ವಿಚಾರಶೀಲ ಮತ್ತು ಮಹಾಮೇಧಾವಿ ಅಧ್ಯಾತ್ಮ ಪಿಪಾಸುವಿಗೆ ಗುರುವಾದರು. 'ನಿವೇದಿತಾ' ಎಂಬ ಹೆಸರನ್ನು ತಮ್ಮ ಗುರುವಿನಿಂದ ಪಡೆದ ನೊಬೆಲ್ ತಮ್ಮ ಉಳಿದ ಜೀವನವನ್ನು ಭಾರತಕ್ಕಾಗಿ ಸಂಪೂರ್ಣವಾಗಿ ಮುಡುಪಾಗಿಟ್ಟರು; ಭಾರತದಾದ್ಯಂತ ಪ್ರವಾಸ ಮಾಡಿದರು; ಭಾರತದ ಅಧ್ಯಯನ ಮಾಡಿದರು. ಸೋದರಿ ನಿವೇದಿತಾ ಕೇವಲ ನಾರೀಶಿಕ್ಷಣದ ಕಡೆಗೆ ಮಾತ್ರ ಮನಸ್ಸಿಟ್ಟವರಲ್ಲ; ಭಾರತದ ಹೃದಯದ ತುಡಿತವನ್ನು ಸರಿಯಾಗಿ ಅರ್ಥಮಾಡಿಕೊಂಡ ಕೆಲವೇ ಕೆಲವು ಜನರಲ್ಲಿ ಅವರೂ ಒಬ್ಬರಾಗಿದ್ದರು. ಕಾಲಕ್ರಮೇಣ ಹಿಂದೂಧರ್ಮದ ಬಗ್ಗೆ ಅತ್ಯಂತ ಸ್ಪಷ್ಟವಾದ ಪರಿಜ್ಞಾನ ಅವರಿಗಾಯಿತು. ಗುರುಕೃಪೆಯಿಂದ ಆಧ್ಯಾತ್ಮಿಕ ಜೀವನದ ಅನೇಕ ಸಿದ್ಧಿಗಳನ್ನು ಅವರು ಪಡೆದುಕೊಂಡರು. ಎಲ್ಲಕ್ಕೂ ಮಿಗಿಲಾಗಿ ಜಗನ್ಮಾತೆ ಶ್ರೀಶಾರದಾದೇವಿಯವರ ಕೃಪೆಗೆ ಪಾತ್ರರಾದರು. ಭಾರತದ ಅಂದಿನ ಅನೇಕ ಮಹನೀಯರಿಗೆ ನಿವೇದಿತಾ ಸ್ಫೂರ್ತಿ ನೀಡಿದರು. ಗೋಪಾಲಕೃಷ್ಣ ಗೋಖಲೆ, ರವೀಂದ್ರನಾಥ ಟ್ಯಾಗೂರ್, ಜಗದೀಶ್‌ಚಂದ್ರ ಬೋಸ್ ಮೊದಲಾದ ದಿಗ್ಗಜರ ಸಾಧನೆಯಲ್ಲಿ ನಿವೇದಿತಾ ಅವರ ಪಾತ್ರ ಸುಸ್ಪಷ್ಟ. ಸೋದರಿ ನಿವೇದಿತಾ ಬಹುಗ್ರಂಥಗಳ ಲೇಖಕಿ, ಬಹುಪತ್ರಗಳ ಲೇಖಕಿ. ಕಲೆ, ಇತಿಹಾಸ, ಶಿಲ್ಪನೈಪುಣ್ಯ ಇತ್ಯಾದಿ ಹಲವಾರು ಕ್ಷೇತ್ರಗಳಲ್ಲಿ ಭಾರತದ ಗರಿಮೆಯನ್ನು ಭಾರತೀಯರಿಗೇ ಬೆರಳು ಮಾಡಿ ತೋರಿಸಿದ ದಿಗ್ದರ್ಶಿನಿ; ಇದಲ್ಲದೆ ಶೈಕ್ಷಣಿಕ ಕ್ಷೇತ್ರದಲ್ಲಿ ಭಾರತದ ನಾರಿಯ ಬೌದ್ಧಿಕ ಬೆನ್ನೆಲುಬನ್ನು ಸರಿಪಡಿಸಿದ ಮಹಾನ್ ಚಿಕಿತ್ಸಕಿ ಕೂಡ ಹೌದು.

**ನಮ್ಮ ದುಃಸ್ಥಿತಿ:** ಭಾರತೀಯರು, ವಿಶೇಷವಾಗಿ ಹಿಂದೂಗಳು, ಪ್ರಾಣಹೀನ ಜನರು, ಕೀಳರಿಮೆಯ ಪ್ರತಿಮೆಗಳು. ಹಿಂದೂಗಳಾಗಿದ್ದರೂ ಹಿಂದೂಧರ್ಮದ ಬಗ್ಗೆ ಏನನ್ನೂ ತಿಳಿದುಕೊಳ್ಳಲು ಪ್ರಯತ್ನಿಸದೆ, ಕೇವಲ ಹಿಂದೂಧರ್ಮದ ನಿಂದನೆ ಮಾಡುವಲ್ಲಿ ನಮ್ಮಲ್ಲಿ ಬಹಳ ಜನರು ಸಿದ್ಧಹಸ್ತರು. ಆದರೆ ಇತರ ಮತಗಳನ್ನು ಅಧ್ಯಯನ ಮಾಡಿ, ಹಿಂದೂಧರ್ಮದ ಮೇಲೆ ಮತ್ತಷ್ಟು ಮಣ್ಣೆರಚಲು ಈ ಜನರು ಸರ್ವದಾ ಸಿದ್ಧರು. ನಮ್ಮಲ್ಲಿ ಅನೇಕರು ನಮ್ಮ ಸನಾತನಧರ್ಮವನ್ನು

ನಿಂದೆ ಮಾಡುವವರನ್ನು ಬೆಂಬಲಿಸುವರೇ ವಿನಾ ತಮ್ಮ ಧರ್ಮಕ್ಕಾಗಿ ಹೋರಾಡುವುದಿಲ್ಲ. ಹೋರಾಟ ಎಂದರೆ ಖಡ್ಗ ಹಿಡಿದು ಬಡಿದಾಡಿ ಕೊಲ್ಲುವುದಲ್ಲ – ಧರ್ಮವನ್ನು ಬೌದ್ಧಿಕವಾಗಿ, ನೈತಿಕವಾಗಿ ರಕ್ಷಿಸುವುದು. ಹಾವಿನಂತೆ ಬುಸುಗುಟ್ಟಿದರೆ ಸಾಕು, ಕಚ್ಚಬೇಕಿಲ್ಲ. ಆದರೆ ಭೀರುಗಳಾದ ಭಾರತೀಯರು ತಮ್ಮ ಸನಾತನ ಸಂಸ್ಕೃತಿಯ ನಿಂದಕರೆದುರು ಅಪರಾಧಿಗಳಂತೆ ತಲೆ ತಗ್ಗಿಸಿ ನಿಲ್ಲುತ್ತಾರೆ. ಮಾತ್ರವಲ್ಲ, ತಾವೇ ತಮ್ಮ ಧರ್ಮದ ನಿಂದೆ ಮಾಡಲೂ ಉತ್ಸಾಹ ತೋರುತ್ತಾರೆ. ಮೂರ್ಖರಿಗೆ ಎಲ್ಲೆಲ್ಲಿಯೂ ಮೌಢ್ಯವೇ ಕಾಣುವುದು. ಭಗವದ್ಗೀತೆಯಂತಹ ಒಂದು ಪರಮಾದ್ಭುತ ಗ್ರಂಥವನ್ನು ಈ ಜಗತ್ತಿಗೆ ನೀಡಿದ ಭಾರತ ವಿಶ್ವದೆದುರು ಹೆಮ್ಮೆಯಿಂದ ಚಿರಕಾಲ ತಲೆ ಎತ್ತಿ ನಿಲ್ಲಬೇಕಿತ್ತು. ಆದರೆ ಪಾಶ್ಚಾತ್ಯರ ಹಳಸು ಅನುಕರಣೆಯನ್ನೇ ಅಸಲು ಸಂಸ್ಕೃತಿ ಎಂದು ಭಾವಿಸುವ ನಮ್ಮ ಮೂರ್ಖ ಜನಾಂಗ, ತನ್ನ ಸಂಪತ್ತಿನ ಬಗ್ಗೆ ಹೆಮ್ಮೆಪಡುವುದು ದೂರವಿರಲಿ, ನಾಚಿಕೆಯಿಂದ ತಲೆಬಾಗಿ ನಿಲ್ಲುತ್ತದೆ. ಇದೇ ನಮ್ಮ ದುರ್ದೈವ!

**ನಿಂದಕರ ಗದ್ದಲ:** ಈ ಎಲ್ಲ ಕಾರಣಗಳಿಂದಾಗಿ ಹಿಂದೂಗಳನ್ನು ನಿಂದಿಸುವುದು ಬಹಳ ಸುಲಭ ಎಂದು ಎಲ್ಲರಿಗೂ ತಿಳಿದಿದೆ. ಹಿಂದೂಧರ್ಮದ ಒಳಿತಿಗಾಗಿ ಕೆಲಸ ಮಾಡುತ್ತಿರುವ ಕೆಲವೇ ಸಂಸ್ಥೆಗಳನ್ನು ಮತ್ತು ಜನರನ್ನು "ಸಾಂಪ್ರ ದಾಯಿಕರು" "ಸಂಕೀರ್ಣರು", "ರಾಷ್ಟ್ರೀಯವಾದಿಗಳು" ಇತ್ಯಾದಿ ಬಿರುದು ನೀಡಿ ಹೀಯಾಳಿಸುವ ಲೇಖಕರು, ಪತ್ರಕರ್ತರು ಮತ್ತು ಪುಂಡ ರಾಜನೀತಿಯ ಜನರ ಸಂಖ್ಯೆಗೆ ಕೊನೆಯುಂಟೆ? ಮತ್ತಾವುದೇ ಧರ್ಮದ ನಿಂದೆಯನ್ನೇನಾದರೂ ಅವರು ಮಾಡಲಿ ನೋಡೋಣ! ಅವರಿಗೆ ಹಿಂದೂಗಳ ನಿಂದೆ ಅತ್ಯಂತ ಸಹಜ, ಅನಾಯಾಸ ಕಾರ್ಯ! ನೀವು ಉದಯೋನ್ಮುಖ ಲೇಖಕರೇ? ನಿಮ್ಮ ಲೇಖನ ಅಥವಾ ಪುಸ್ತಕವನ್ನು ಯಾರೂ ಓದುತ್ತಿಲ್ಲವೇ? "ಭಾರತದ ಸಕಲ ಸಂಕಟಗಳ ಮೂಲವೇ 'ರಾಷ್ಟ್ರೀಯವಾದಿಗಳು', ಅಥವಾ 'ಸಾಂಪ್ರದಾಯಿಕ ಹಿಂದೂಗಳು' " ಎಂಬ ಅಭಿಪ್ರಾಯವನ್ನು ಬರುವ ಒಂದು ಲೇಖನ ಬರೆದುಬಿಡಿ. ಇದರಿಂದ ನಿಮ್ಮ ಲೇಖನ ಅಥವಾ ಗ್ರಂಥ ವಿಖ್ಯಾತವಾಗುತ್ತದೆ. ಇತ್ತೀಚೆಗೆ ಎಡ್ವರ್ಡ್ ಲೂಸ್ (Edward Luce) ಎಂಬ ವ್ಯಕ್ತಿ ಐದಾರು ವರ್ಷ ಭಾರತದಲ್ಲಿ ಕಳೆದು, ಭಾರತದ ಬಗ್ಗೆ ಒಂದು ಅತ್ಯಂತ ಜನಪ್ರಿಯವಾದ ಪುಸ್ತಕವನ್ನು ಬರೆದಿದ್ದಾರೆ. ಭಾರತದ ಮಹಾನ್ ವಿಚಾರವಾದಿಗಳು ಆ ಗ್ರಂಥವನ್ನು ಅದ್ಭುತ ಎಂದಿದ್ದಾರೆ. ಕಾರಣ ಸ್ಪಷ್ಟ – ಅದರಲ್ಲಿ ಬರುವ ಹಿಂದೂಗಳ ಅವಹೇಳನ, ಹಿಂದೂ ಸಂಸ್ಥೆಗಳ ನಿಂದೆ.

**ಅಗ್ರೆಸಿವ್ ಹಿಂದೂಧರ್ಮ:** ಈ ಹಿನ್ನೆಲೆಯಲ್ಲಿ ನಿವೇದಿತಾ ಬರೆದಿರುವ ಪುಟ್ಟಪುಸ್ತಕ ಅತ್ಯಂತ ಮಹತ್ವಪೂರ್ಣವಾದುದು. ಸ್ವಾಮಿ ವಿವೇಕಾನಂದರ ದಿವ್ಯಜೀವನದಿಂದ ಸ್ಫೂರ್ತಿ ಪಡೆದ ಸೋದರಿ ನಿವೇದಿತಾ ಭಾರತದ ಮತ್ತು ಸನಾತನ ಧರ್ಮದ ಬಗೆಗೆ ಅತ್ಯಂತ ಸ್ಪಷ್ಟವಾದ ಧೋರಣೆಯನ್ನು ತಳೆದಿದ್ದರು. ಹಾಗಾಗಿ, ಭಾರತೀಯರ 'ಆತ್ಮಹೀನತೆ', ಮೌಢ್ಯ ಮತ್ತು ನಕಾರಾತ್ಮಕ ಭಾವನೆಗಳನ್ನು ಕಂಡು ಅವರು ಬಹಳ ಪರಿತಾಪಪಡುತ್ತಿದ್ದರು. ಒಬ್ಬ ಅತ್ಯಂತ ಧನಿಕ, "ನನ್ನ ಬಳಿ ತಿನ್ನಲೂ ಹಣವಿಲ್ಲ, ನಾನು ಭಿಕಾರಿ" ಎಂದು ಭಾವಿಸಿ ಅತ್ತು ಕರೆಯುವಂತಹ ಸ್ಥಿತಿ ಈ ಭಾರತೀಯರದ್ದು ಎಂದು ನಿವೇದಿತಾ ತಿಳಿದಿದ್ದರು. ಹಾಗಾಗಿಯೇ ಹಿಂದೂಗಳಿಗೆ, ತಮ್ಮ ಧರ್ಮಕ್ಕಿಂತ ಪರಧರ್ಮಗಳ ಕಡೆಗೇ ಒಲವು; ಇದರಿಂದಾಗಿಯೇ ಅವರ ಅರ್ಥಹೀನ ಪ್ರಲಾಪ, ಸ್ವಧರ್ಮನಿಂದೆ ಮುಂತಾದವು ಕಂಡುಬರುವುದು. ತಮ್ಮ ಈ ಪುಟ್ಟಪುಸ್ತಕದಲ್ಲಿ ನಿವೇದಿತಾ, ಭಾರತೀಯರಿಗೆ ತಮ್ಮ ಪರಂಪರೆ, ಧರ್ಮ, ಕಲೆ, ಸಂಸ್ಕೃತಿ ಇತ್ಯಾದಿಗಳನ್ನು ಉಳಿಸಿಕೊಳ್ಳುವ ಮಾರ್ಗದರ್ಶನ ನೀಡಿದ್ದಾರೆ. ಅವರೇ ಒಂದು ಪತ್ರದಲ್ಲಿ ಬರೆದಿರುವಂತೆ, ಈ ಪುಸ್ತಕವನ್ನು ಮೂರೇ ದಿನಗಳಲ್ಲಿ ಅವರು ಬರೆದುಮುಗಿಸಿದರು. ಈ ಪುಸ್ತಕ ಕಠಿಣ, ಅರ್ಥಮಾಡಿಕೊಳ್ಳುವುದು ಕಷ್ಟ ಎಂದೂ ಬರೆದರು. ಈ ಪುಸ್ತಕವನ್ನು ಬರೆದ ಬಳಿಕ ನಿವೇದಿತಾ ರೋಗಗ್ರಸ್ತರಾದರು. ಹಾಗಾಗಿ, ಅವರ ಮನಸ್ಸು ಹೇಳಿತು: 'ಮೃತ್ಯುವಿಗೆ ಮುಂಚೆ ಸ್ವಾಮಿ ವಿವೇಕಾನಂದರ ಸಂಪೂರ್ಣ ಸಂದೇಶಗಳ ಸಾರಸರ್ವಸ್ವವನ್ನು ಒಂದು ಚಿಕ್ಕ ಪುಸ್ತಕದ ಮೂಲಕ ನನ್ನ ಕೊನೆಯ ಸಂದೇಶದ ರೂಪದಲ್ಲಿ ಭಾರತೀಯರಿಗೆ ನೀಡಬೇಕು' ಎಂದು. ಆದರೆ ದೈವಕೃಪೆಯಿಂದ ಅವರು ಅಷ್ಟು ಬೇಗ ದೇಹತ್ಯಾಗ ಮಾಡಲಿಲ್ಲ.

ಈ ಪುಸ್ತಕವನ್ನು ಮೊದಲ ಬಾರಿಗೆ ಚೆನ್ನೈ ನಗರದ ನಟೇಶನ್ ಸಂಸ್ಥೆಯು ೧೯೦೫ರಲ್ಲಿ ಮುದ್ರಿಸಿತು. ಕೊಲ್ಕತಾದಲ್ಲಿರುವ ರಾಮಕೃಷ್ಣ ಮಹಾಸಂಘದ ಬಂಗಾಳಿ ಪ್ರಕಾಶನ ವಿಭಾಗವಾದ ಉದ್ಬೋಧನ್ ಕಾರ್ಯಾಲಯದಿಂದ ೧೯೨೭ರಲ್ಲಿ ಇದರ ದ್ವಿತೀಯ ಸಂಸ್ಕರಣ ಹೊರಬಂದಿತು. ೧೯೫೦ ರಲ್ಲಿ ತೃತೀಯ ಹಾಗೂ ೧೯೬೬ ರಲ್ಲಿ ಚತುರ್ಥ ಸಂಸ್ಕರಣಗಳು ಪ್ರಕಟವಾದವು. ಕೇವಲ ಮೂರ್‍ನಾಲ್ಕು ಫುಲ್‌ಸ್ಕೇಪ್ ಪುಟಗಳಷ್ಟು ಮಾತ್ರವೇ ಇರುವ ಈ ಪುಟ್ಟ ಹೊತ್ತಗೆಯಲ್ಲಿ ನಿವೇದಿತಾ ಭಾರತೀಯರಿಗೆ ಮನೋಜ್ಞವಾದ ದಿಗ್ದರ್ಶನವನ್ನೇ ನೀಡಿದ್ದಾರೆ. ಈಗ ಏಳು ಸಂಸ್ಕರಣಗಳನ್ನು, ಹಲವಾರು ಪುನರ್ಮುದ್ರಣಗಳನ್ನೂ ಕಂಡಿರುವ ಈ ಕಿರುಪುಸ್ತಕ ಅದೆಷ್ಟು ಜನರಿಗೆ ಸ್ಫೂರ್ತಿ ನೀಡಿದೆಯೋ ತಿಳಿಯದು. ಸ್ವಾಮಿ ವಿವೇಕಾನಂದರ ಇನ್ನೊಬ್ಬ ಶ್ರೇಷ್ಠ ಶಿಷ್ಯೆ ಜೋಸೆಫಿನ್ ಮ್ಯಾಕ್ಲೌಡ್ ಕೂಡ ಈ ಪುಸ್ತಕವನ್ನು ಓದಿ ತುಂಬ ಮೆಚ್ಚಿದ್ದಾರೆ.

**ನಿವೇದಿತಾ ಅವರ ಸಂದೇಶ:** 'ಅಗ್ರೆಸಿವ್ ಹಿಂದೂಯಿಸಮ್' ಪುಸ್ತಕದಲ್ಲಿ ಉತ್ತೇಜನಕಾರಿ ಅಥವಾ ಪ್ರಚೋದನೆ ಉಂಟುಮಾಡುವ ಯಾವ ಮಾತೂ ಇಲ್ಲ. ಹಾಗಾದರೆ ಏನು ಹೇಳುತ್ತದೆ ಈ ಕಿರುಪುಸ್ತಕ? ಮೊದಲನೆಯ ಅಧ್ಯಾಯದ ಹೆಸರು 'ಆಧಾರ'. ಇಲ್ಲಿ ನಿವೇದಿತಾ ಹೇಳುವುದಿಷ್ಟು: ೧. ಅಸಲು ಶಿಕ್ಷಣವು ಆಧುನಿಕವೂ, ಉದಾರವೂ, ಮನೋವೈಜ್ಞಾನಿಕವೂ ಮತ್ತು ಮಾನವನ ಇತಿಹಾಸದ ಭಿತ್ತಿಯ ಮೇಲೆ ಸ್ಥಾಪಿತವಾದದ್ದೂ ಆಗಿರಬೇಕು. ಹಾಗಾದರೆ ಮಾತ್ರವೇ